# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | | 50 (106) |
| ಮಾನ್ಯ ಸದಸ್ಯರ ಹೆಸರು | | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 11.08.2025 |
| ಪ್ರಶ್ನೆ | | ಉತ್ತರ |
| (ಅ) | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಮೈಸೂರು ಇಲ್ಲಿ ವರ್ಕ್ ಲೋಡ್ ಇಲ್ಲದಿದ್ದರೂ ಸಾವಿರಕ್ಕೂ ಮೀರಿ ನಿಯಮ ಬಾಹಿರವಾಗಿ ತಾತ್ಕಾಲಿಕ ಸಿಬ್ಬಂದಿ ನೇಮಕಾತಿ, ವರ್ಗಾವಣೆಗಳಲ್ಲಿನ ಭ್ರಷ್ಟಾಚಾರ ಹಾಗೂ ದುಂದುವೆಚ್ಚ ಇತ್ಯಾದಿಗಳಲ್ಲಿನ ಸಿಬ್ಬಂದಿಗಳು ಪ್ರತಿಭಟಿಸಿ ಈ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರನ್ನು ನೇಮಿಸುವುದಾಗಿ ಸರ್ಕಾರವು ಸದನದಲ್ಲಿ ಭರವಸೆ ನೀಡಿದ್ದು, ವಿಚಾರಣಾ ವರದಿಯು ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ: | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಮೈಸೂರು ಇಲ್ಲಿ ವರ್ಕ್ ಲೋಡ್ ಇಲ್ಲದಿದ್ದರೂ ಸಾವಿರಕ್ಕೂ ಮೀರಿ ನಿಯಮ ಬಾಹಿರವಾಗಿ ತಾತ್ಕಾಲಿಕ ಸಿಬ್ಬಂದಿ ನೇಮಕಾತಿ, ವರ್ಗಾವಣೆಗಳಲ್ಲಿನ ಭ್ರಷ್ಟಾಚಾರ ಹಾಗೂ ದುಂದುವೆಚ್ಚ ಇತ್ಯಾದಿಗಳಲ್ಲಿನ ಸಿಬ್ಬಂದಿಗಳು ಪ್ರತಿಭಟಿಸಿರುವ ಪ್ರಕರಣದ ಕುರಿತು ಪರಿಶೀಲನೆ ನಡೆಸಿ ಪರಿಶೀಲನಾ ವರದಿಯನ್ನು ಸಲ್ಲಿಸುವಂತೆ ದಿನಾಂಕ: 21.03.2025 ರಂದು ಸರ್ಕಾರವು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಇವರಿಗೆ ನಿರ್ದೇಶಿಸಲಾಗಿದ್ದು, ಅದರನ್ವಯ ಸದರಿಯವರು ಸರ್ಕಾರಕ್ಕೆ ದಿನಾಂಕ: 21.05.2025ರಂದು ವರದಿ ಸಲ್ಲಿಸಿರುತ್ತಾರೆ.<br><br>ಸದರಿ ವರದಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ, 1992ರ ಪ್ರಕರಣ 08 ರಡಿ ಪ್ರದತ್ತವಾದ ಅಧಿಕಾರದನ್ವಯ ಘನತೆವೆತ್ತ ರಾಜ್ಯಪಾಲರು ವರದಿಯಲ್ಲಿನ ಅಂಶಗಳ ಕುರಿತು ಪ್ರತ್ಯೇಕವಾಗಿ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿ ತನಿಖೆಯನ್ನು ಪ್ರಾರಂಭಿಸಲು ಅನುಮೋದನೆ ನೀಡುವಂತೆ ಘನತೆವೆತ್ತ ಕುಲಾಧಿಪತಿಗಳನ್ನು ಕೋರಲು ಕ್ರಮವಹಿಸಲಾಗುತ್ತಿದೆ. |
| (ಆ) | ಈ ಕುರಿತು ವಿಚಾರಣಾ ವರದಿಯು ಸಲ್ಲಿಕೆಯಾಗಿದ್ದರೆ ಸಲ್ಲಿಕೆಯಾದ ದಿನಾಂಕ ಮತ್ತು ವರದಿಯ ಪ್ರತಿಯನ್ನು ನೀಡುವುದು: ವಿಚಾರಣಾ ವರದಿಯು ಸಲ್ಲಿಕೆಯಾಗಿದ್ದರೆ ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮವೇನು? (ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಇಡಿ 38 ಯುಓವಿ 2025

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.